
# ಒಂದು ಟೊಮ್ಯಾಟೊ ಕಥೆ

■ ಹರಿ ಸುಂದರ್ ಕೌಶಿಕ್
ಕಲೆ: ಸಂತೋಷ್ ಸಸಿಹಿತ್ಲು



ಒಂದು ಹಳ್ಳಿಯಲ್ಲಿ ಆರನೇ ತರಗತಿಯಲ್ಲಿ ಓದುತ್ತಿದ್ದ ಹನುಮ, ಅವನ ಅಮ್ಮ, ಅಪ್ಪ ವಾಸಿಸುತ್ತಿದ್ದರು. ಹನುಮನಿಗೆ ಕಲಿಕೆಯಲ್ಲಿ ಅಷ್ಟು ಆಸಕ್ತಿ ಇರಲಿಲ್ಲ. ಒಂದು ದಿನ ಅವನು ಶಾಲೆಯಿಂದ ಬೇಸರಗೊಂಡು ಮನೆಗೆ ಬಂದನು. ಅದನ್ನು ಗಮನಿಸಿದ ಅವನ ಅಮ್ಮ 'ಹೀಗೇಕೆ ಸಪ್ಪಗಿರುವೆ? ಬೇಸರಗೊಂಡಿರಲು ಕಾರಣವೇನು? ಶಾಲೆಯಲ್ಲಿ ಯಾರಾದರೂ ಅವಮಾನ ಮಾಡಿದರೆ?' ಕೇಳಿದರು.

ಆಗ ಹನುಮ ಕಣ್ಣಲ್ಲಿ ನೀರು ತುಂಬಿಕೊಂಡು 'ಅಮ್ಮ, ಈ ಬಾರಿ ನನಗೆ ಒಟ್ಟು 6 ವಿಷಯಗಳು ಇವೆ. ಅದರಲ್ಲಿ ನಾನು 5 ವಿಷಯಗಳಲ್ಲಿ ಪಾಸ್ ಆಗಿದ್ದೀನಿ. ಒಂದು ವಿಷಯ, ಅದೂ ಗಣಿತದಲ್ಲಿ ಮಾತ್ರ ಫೇಲ್ ಆಗಿದ್ದೀನಿ. ಆದರೆ ನಾನು 5 ವಿಷಯಗಳಲ್ಲಿ ಪಾಸ್ ಆದರೂ ಎಲ್ಲರೂ ನನ್ನನ್ನು ಫೇಲ್ ಆದ ಸುದ್ದಿಯನ್ನೇ ದೊಡ್ಡದು ಮಾಡಿ ಗೇಲಿ ಮಾಡಿ, ಹೀಯಾಳಿಸಿದರು. ಕೀಳಾಗಿ ಮಾತಾಡಿ ಕೀಟಲೆ ಮಾಡಿದರು. ನಂಗೆ ತುಂಬಾ ನಾಚಿಕೆಯಾಯಿತು' ಎಂದು ಹೇಳುವಷ್ಟರಲ್ಲೇ ಕಣ್ಣಿನಿಂದ ದಳದಳ ನೀರು ಹರಿಯಿತು. ಆಗ ಅಮ್ಮ ಹನುಮನಿಗೆ ಸಮಾಧಾನ ಮಾಡಿಸಲು ನೀತಿ ಮಾತುಗಳನ್ನು ಹೇಳತೊಡಗಿದರು.

'ಮಗನೇ! ಅಳಬೇಡ, ಜಗತ್ತಿನಲ್ಲಿ ಜನರ ಸ್ವಭಾವವೇ ವಿಚಿತ್ರ, ನೀನು ಎಷ್ಟೇ ಒಳ್ಳೆಯದ್ದನ್ನು ಮಾಡಿದ್ದರೂ ನೀನು ಮಾಡುವ ಒಂದು ತಪ್ಪನ್ನೇ ಗುರುತಿಟ್ಟುಕೊಂಡು ಮಾಡಿದ್ದ ಒಳ್ಳೆಯ ಕೆಲಸಗಳನ್ನು ಮರೆಯುತ್ತಾರೆ. ಇದರ ಬಗ್ಗೆ ಕವಿ ಅಮೃತ ಸೋಮೇಶ್ವರರು, ತಮ್ಮ ಹೃದಯವಚನದಲ್ಲಿ 'ಒಂಬತ್ತು ತಡವೆ ಉಪಕರಿಸಿ ಒಮ್ಮೆ ತಪ್ಪಲು, ಮೊದಲಿನೆಲ್ಲವ ಮರೆವರಯ್ಯ' ಎಂದು ಚೆನ್ನಾಗಿ ತಿಳಿಸಿದ್ದಾರೆ. ನೀನು 5 ಟೊಮ್ಯಾಟೊಗಳನ್ನೂ ಒಂದು ಬುಟ್ಟಿಯಲ್ಲಿ ಇಟ್ಟು ಅದರ ನಡುವೆ ಒಂದು ಕೊಳೆತು ಹೋಗಿರುವ ಟೊಮ್ಯಾಟೊ ಇಡು. 'ಈಗ ಹೇಳು 5 ಒಳ್ಳೆಯ ಟೊಮ್ಯಾಟೊಗಳ ಬಗ್ಗೆ ಮಾತನಾಡುತ್ತಾರಾ ಅಥವಾ ಕೊಳೆತುಹೋಗಿದ್ದ ಒಂದು ಟೊಮ್ಯಾಟೊ ಬಗ್ಗೆ ಮಾತನಾಡುತ್ತಾರಾ?' ಎಂದು ಅಮ್ಮ ಮತ್ತೆ ಪ್ರಶ್ನಿಸಿದಳು.

ಅದಕ್ಕೆ ಹನುಮ 'ಕೊಳೆತು ಹೋಗಿರುವ ಟೊಮ್ಯಾಟೊ ಬಗ್ಗೆ ಮಾತನಾಡುತ್ತೇವೆ' ಎಂದು ಉತ್ತರಿಸಿದ.

'ಆ ಒಂದು ಕೊಳೆತು ಹೋಗಿರುವ ಟೊಮ್ಯಾಟೊ ಎಲ್ಲರನ್ನೂ ಬೇಗ ಆಕರ್ಷಿಸುತ್ತದೆ. ಉಳಿದವು ಚೆನ್ನಾಗಿದ್ದರೂ ಯಾರ ಗಮನಕ್ಕೂ ಬರುವುದಿಲ್ಲ' ಇದೇ ನಿನ್ನ ಪರೀಕ್ಷೆಯಲ್ಲಿ ಆಗಿದೆ ಎಂದಳು ಅಮ್ಮ. ಕಾಪಿ ಹೊಡೆದು ಪಾಸ್ ಆಗುವುದಕ್ಕಿಂತ ನಿನಗೆ ತಿಳಿದಷ್ಟು ಬರೆದು ಫೇಲ್ ಆಗಿರುವುದು ತಪ್ಪೇನಲ್ಲ. ಇನ್ನು ಮುಂದೆ ಚೆನ್ನಾಗಿ ಓದಿ ನಿನ್ನನ್ನು ಅವಮಾನಿಸುವವರ ಮುಂದೆ ತಲೆ ಎತ್ತಿ ನಿಲ್ಲುವಂತಾಗು ಎಂದು ಧೈರ್ಯ ತುಂಬಿದಳು. ಆಗ ಹನುಮ 'ಸರಿ ಅಮ್ಮ, ಮುಂದಿನ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ ಪಾಸ್ ಆಗುತ್ತೇನೆ' ಎಂದು ವಿಶ್ವಾಸದಿಂದ ಹೇಳಿದಾಗ ಅಮ್ಮನ ಮುಖದಲ್ಲಿ ಸಂತಸ ಮೂಡಿತು. ■

# ಚಂದಿರನ ತುಣುಕು

■ ಡಾ. ಕೆ.ಬಿ. ರಂಗಸ್ವಾಮಿ
ಕಲೆ: ಸಂತೋಷ್ ಸಸಿಹಿತ್ಲು

ಚಂದಿರನ ತುಣುಕೊಂದು
ಸಿಡಿದು ಬಂತು ಭೂಮಿಗೆ
ಮೆಲ್ಲನೆತ್ತಿ ತಂದೆವದನು
ನಮ್ಮ ಮನೆಯ ಅಂಗಳಕೆ

ಅಮ್ಮನ ಮಡಿಲಲ್ಲೊಬ್ಬ
ಪುಟ್ಟ ಬಾಲ ಚಂದಿರ
ಕೋಟಿ ತಾರೆ ಮಿನುಗಿದಂತೆ
ಅವನ ಮೊಗವು ಸುಂದರ

ಬೊಚ್ಚುಬಾಯಿ ಬಿಟ್ಟುಕೊಂಡು
ಅವನು ಒಮ್ಮೆ ನಕ್ಕರೆ
ಸವಿದಂತೆ ಹೊಟ್ಟೆ ತುಂಬಾ
ಹಾಲು ತುಪ್ಪ ಸಕ್ಕರೆ

ರಚ್ಚೆ ಹಿಡಿದು ಅಳುತಲಿರಲು
ಅದುವೇ ಇಂಪು ಸಂಗೀತ
ಕಿಲಕಿಲನೆ ನಗುತಲಿರಲು
ಆಗಮಿಸುವನು ವಸಂತ

ಪಿಳಿ ಪಿಳಿ ಕಣ್ಣು ಬಿಡುತಾ
ಅವನು ಸುತ್ತ ನೋಡಲು
ಸುರಿಯುವುದು ಹಗಲಿನಲ್ಲೂ
ಹಾಲು ಬೆಳದಿಂಗಳು! ■

